**<u>ಸಾಕ್ಷಿಯನ್ನು ಪುನಃ ದಿನಾಂಕ 25-11-2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>**

**<u>ಪಾಟೀಸವಾಲುಃ ಅರ್ಜಿದಾರರ ಪ್ರತಿನಿಧಿ ಶ್ರೀ ಎ.ಆರ್.ಎಮ್.ಐ. ರವರಿಂದಃ</u>**

**3.** ನಾನು ಅರ್ಜಿದಾರರ ವಿರುದ್ಧ ನಡೆದ ಇಲಾಖಾ ವಿಚಾರಣೆಯಲ್ಲಿವಿಚಾರಣಾಧಿಕಾರಿ ಆಗಿರಲಿಲ್ಲ. ಇಲಾಖಾ ವಿಚಾರಣೆಯಲ್ಲಿ ಕಾಯ್ದೆ ಯ ಪ್ರಕಾರ ಹಿಯರಿಂಗ್ ದಿನಾಂಕಗಳನ್ನು ನಿಗಧಿಪಡಿಸಿ ಮುಕ್ತಾಯಗೊಳಿಸಿದರು. ಕಾನೂನಿನ ಪ್ರಕಾರ ಎರಡು ವರ್ಷಗಳವರೆಗೆ ತರಭೇತಿಯ ಅವಧಿ ಇರುತ್ತದೆ ನಂತರ ಅವರನ್ನು ಖಾಯಂ ನೌಕರರೆಂದು ಪರಿಗಣಿಸಲಾಗುತ್ತದೆ. ತರಭೇತಿಯ ಅವಧಿಯಲ್ಲಿ ನೌಕರರು ಅವರಿಗೆ ನಿಗಧಿಪಡಿಸಿದ ಮಾರ್ಗದಲ್ಲಿ ಬಸ್ಸ್ ನ್ನು ಚಾಲನೆ ಮಾಡಬೇಕಾಗಿರುತ್ತದೆ. ತರಭೇತಿಯ ಅವಧಿಯಲ್ಲಿ ನೌಕರರಿಗೆ ಸ್ಟೈಫಂಡ್ ಇರುತ್ತದೆ, ಖಾಯಂಗೊಳಿಸಿದ ನಂತರ ಸಂಬಳವನ್ನು ಕೊಡಲಾಗುತ್ತದೆ.

**4.** ಇಲಾಖಾ ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಹಾಜರು ಪಡಿಸಿದ ಕೆಲವು ಮುಖ್ಯವಾದ ದಾಖಲೆಗಳನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ ಮತ್ತು ಅವುಗಳನ್ನು ತಿರಸ್ಕರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕುವ ಅಧಿಕಾರವಿರುತ್ತದೆ. ಈ ಪ್ರಕರಣದಲ್ಲಿ ಅರ್ಜಿದಾರರನ್ನು 2 ನೇ ಬಾರಿಗೆ ಕೆಲಸದಿಂದ ವಜಾ ಮಾಡಲಾಗಿರುತ್ತದೆ. ಶಿಸ್ತು ಪ್ರಾಧಿಕಾರವು ಶಿಕ್ಷೆಯನ್ನು ಕೊಡುವ ಬಗ್ಗೆ ಪರಿಗಣಿಸುತ್ತಾರೆ. ಅರ್ಜಿದಾರರು ತರಭೇತಿಯ ಅವಧಿಯಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದರಿಂದ ಆತನಿಗೆ ಮುಂಚಿತವಾಗಿ ಯಾವುದೇ ನೋಟಿಸ್ ನ್ನು ಕೊಡದೆ ಕೆಲಸದಿಂದ ವಜಾ ಮಾಡಲಾಗಿರುತ್ತದೆ. ನೌಕರರಿಗೆ ಸಿ ಮತ್ತು ಆರ್ ನಿಯಮಗಳ ಪ್ರಕಾರ ಶಿಕ್ಷೆಯನ್ನು ವಿಧಿಸಲಾಗುತ್ತದೆ.

**5.** ಶಿಸ್ತು ಪ್ರಾಧಿಕಾರವು ಈ ಪ್ರಕರಣದಲ್ಲಿ ಅರ್ಜಿದಾರರ ಮೇಲೆ ಹೊರೆಸಿರುವ ಆಪಾದನೆಗಿಂತ ತೀರ್ವವಾದ ಆಪಾದನೆ ಮಾಡಿದ ಬೇರೆ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಆದೇಶ ಮಾಡಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತರಭೇತಿಯ ಅವಧಿ ಮುಗಿದ ನಂತರ ಆತನ ಕೆಲಸವನ್ನು ದುರುದ್ದೇಶದಿಂದ ಖಾಯಂಗೊಳಿಸದೆ ಎದುರುದಾರರು ತೊಂದರೆಯನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಶಿಸ್ತು ಪ್ರಾಧಿಕಾರವು ಶಿಕ್ಷೆಯನ್ನು ವಿಧಿಸುವ ಮಾನದಂಡವನ್ನು ಪರಿಗಣಿಸದೆ ಅರ್ಜಿದಾರರಿಗೆ ಹೆಚ್ಚು ಪ್ರಮಾಣದ ಶಿಕ್ಷೆಯನ್ನು ವಿಧಿಸಿ ಬೇರೆ ನೌಕರರನ್ನು ಕೆಲಸಕ್ಕೆ ಪುನಃ ನೇಮಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**6.** ಅರ್ಜಿದಾರರಿಗೆ ತರಭೇತಿ ಅವಧಿ ಮುಗಿದ ನಂತರವೂ ಕಾನೂನಿನ ಪ್ರಕಾರ ಆತನಿಗೆ ಕೊಡಬೇಕಾಗಿದ್ದ ವೇತನವನ್ನು ಪಾವತಿ ಮಾಡದೆ ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಎದುರುದಾರರ ಆಡಳಿತ ಮಂಡಳಿ ಮತ್ತು ಕೆ.ಎಸ್.ಆರ್.ಟಿ.ಸಿ. ನೌಕರರ ಯೂನಿಯನ್ ನಡುವೆ ಆಗಿದ್ದ ಕರಾರಿನ ಪ್ರಕಾರ ತರಭೇತಿಯ ಅವಧಿ ಮತ್ತು ವೇತನ ಬಗ್ಗೆ ತೀರ್ಮಾನವಾಗಿದ್ದರೂ ಸಹ ಅದನ್ನು ಉಲ್ಲಂಘಿಸಿ ಅರ್ಜಿದಾರರನ್ನು ಕೆಲಸದಿಂದ ವಜಾ ಮಾಡುವ ಆದೇಶವನ್ನು ಹೊರಡಿಸಲಾಗಿದೆ ಎಂದರೆ ಸರಿಯಲ್ಲ. ಎದುರುದಾರರು ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಮತ್ತು ಸಿ ಅಂಡ್ ಆರ್ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ಅರ್ಜಿದಾರರವರಿಂದ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**